# ಕಾಸರಗೋಡು ಸಿಪಿಸಿಆರ್‌ಐ ಶತಮಾನೋತ್ಸವ ಸಂಭ್ರಮ

# ವರ್ಷವಿಡೀ ಕಾರ್ಯಕ್ರಮ; ಮಾ.12ಕ್ಕೆ ಉದ್ಘಾಟನೆ

HG 9/3/16

**ಕಾಸರಗೋಡು:** ಕಾಸರಗೋಡು ಕೇಂದ್ರೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಕೇಂದ್ರವಾದ ಸಿಪಿಸಿಆರ್‌ಐಯು ಶತಮಾನೋತ್ಸವದ ಸಂಭ್ರಮದಲ್ಲಿದೆ. ಶತಮಾನೋತ್ಸವದ ಅಂಗವಾಗಿ ಸಿಪಿಸಿಆರ್‌ಐ ನೇತೃತ್ವದಲ್ಲಿ ಒಂದು ವರ್ಷ ಕಾಲಾವಧಿಯ ವಿವಿಧ ಕಾರ್ಯಕ್ರಮಗಳು ನಡೆಯಲಿದ್ದು , ಈ ಕಾರ್ಯಕ್ರಮಗಳ ಔಪಚಾರಿಕ ಉದ್ಘಾಟನೆಯನ್ನು ಮಾರ್ಚ್ 12ರಂದು ಪೂರ್ವಾಹ್ನ 10 ಗಂಟೆಗೆ ಐಸಿಎಆರ್‌ನ ಉಪನಿರ್ದೇಶಕ ಡಾ.ಎನ್.ಕೆ. ಕೃಷ್ಣಕುಮಾರ್ ನಿರ್ವಹಿಸುವರು ಎಂದು ಸಿಪಿಸಿಆರ್‌ಐ ನಿರ್ದೇಶಕ ಡಾ.ಪಿ.ಚೌಡಪ್ಪ ತಿಳಿಸಿದ್ದಾರೆ. ಮಂಗಳವಾರ ಸಿಪಿಸಿಆರ್‌ಐಯಲ್ಲಿ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಈ ವಿಷಯ ತಿಳಿಸಿದರು.

ಶತಮಾನೋತ್ಸವದ ಪ್ರಯುಕ್ತ ಸಿಪಿಸಿಆರ್‌ಐ ಅಧೀನದಲ್ಲಿರುವ ವಿವಿಧ ಸಂಸ್ಥೆಗಳಲ್ಲಾಗಿ ಡಿಸೆಂಬರ್ ತನಕ 150ರಷ್ಟು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. 1916ರಲ್ಲಿ ಈ ಕೇಂದ್ರವನ್ನು ತೆಂಗಿನಕಾಯಿಯ ಸಂಶೋಧನಾ ಸಂಸ್ಥೆಯಾಗಿ ಆರಂಭಿಸಲಾಯಿತು. ಈ ಕಾರ್ಯಕ್ರಮದ ನಿಮಿತ್ತ ವಿವಿಧ ಹಂತಗಳಲ್ಲಾಗಿ ಸಿಪಿಸಿಆರ್‌ಐ ಅಭಿವೃದ್ಧಿಪಡಿಸಿದ 100 ತೆಂಗಿನ ಸಸಿಗಳನ್ನು 100 ಮಂದಿ ಕೃಷಿಕರು ಏಕಕಾಲದಲ್ಲಿ ನೆಡುವರು. ಈ ಪ್ರದೇಶವನ್ನು ಬಳಿಕ ಸೆಂಚುರಿ ತೆಂಗು ಪಾರ್ಕ್ ಆಗಿ ಮಾರ್ಪಡಿಸಲಾಗುವುದು.

ಇದಲ್ಲದೆ ಕಿಸಾನ್ ಮೇಳ ಜರಗಲಿದ್ದು, ಇದರಲ್ಲಿ 300ರಿಂದ 400 ಮಂದಿ ಕೃಷಿಕರು ಪಾಲ್ಗೊಳ್ಳುವರು. ಶತಮಾನೋತ್ಸವದಲ್ಲಿ ಭಾಗವಹಿಸಲು ಈಗಾಗಲೇ ಎರಡು ಸಾವಿರಕ್ಕಿಂತ ಅಧಿಕ ಮಂದಿ ಕೃಷಿಕರು ತಮ್ಮ ಹೆಸರನ್ನು ನೋಂದಾಯಿಸಿದ್ದಾರೆ. ಕಿಸಾನ್ ಮೇಳದ ಪ್ರಯುಕ್ತ ಪ್ರದರ್ಶನ ಕೂಡ ನಡೆಯಲಿದೆ. ಇದರಲ್ಲಿ ಐಸಿಎಆರ್ ಸಂಸ್ಥೆಗಳು, ಕೃಷಿ ಸಂಬಂಧಿತ ಏಜೆನ್ಸಿಗಳು, ಕುಟುಂಬಶ್ರೀ ಘಟಕಗಳು ಸಹಿತ ಇನ್ನಿತರ ಸಂಘ ಸಂಸ್ಥೆಗಳು ಪಾಲ್ಗೊಳ್ಳಲಿವೆ.

ತೆಂಗಿನಕಾಯಿ ಆಧರಿಸಿ ಸಿಪಿಸಿಆರ್‌ಐ ತಯಾರಿಸಿದ ಚಾಕಲೇಟ್ ಬಿಡುಗಡೆಯು ಈ ವೇಳೆ ಜರಗಲಿದೆ. ಮಾತ್ರವಲ್ಲದೆ ದೇಶದ ವಿವಿಧೆಡೆಗಳಲ್ಲಿ ಕೃಷಿಗೆ ಸಂಬಂಧಿಸಿ ನಡೆದ ವಿವಿಧ ಕಾರ್ಯಕ್ರಮಗಳನ್ನು ಒಗ್ಗೂಡಿಸಿ ತಯಾರಿಸಲಾದ ಪುಸ್ತಕದ ಬಿಡುಗಡೆಯು ಶತಮಾನೋತ್ಸವದ ಸಮಾರೋಪವಾದ ಡಿಸೆಂಬರ್ ತಿಂಗಳಲ್ಲಿ ನಡೆಯಲಿದೆ ಎಂದು ಡಾ.ಪಿ.ಚೌಡಪ್ಪ ತಿಳಿಸಿದರು.

ಒಂದೇ ಕೃಷಿ ಕೈಗೊಳ್ಳುವುದರಿಂದ ಕೃಷಿಕರಿಗೆ ಆದಾಯ ತೀರಾ ಕಡಿಮೆಯಾಗುವುದು. ಕೃಷಿಕರು ವಿವಿಧ ಬೆಳೆಗಳನ್ನು ಬೆಳೆಸಲು ಹೆಚ್ಚಿನ ಆಸಕ್ತಿ ತೋರಬೇಕು. ಮಿಶ್ರ ಬೆಳೆಯಿಂದ ಅಪಾರ ಆದಾಯ ಲಭಿಸುವಂತೆ ಮಾಡಬಹುದಾಗಿದೆ. ತ್ಯಾಜ್ಯಗಳನ್ನು ಬಳಸಿ ಗೊಬ್ಬರ ತಯಾರಿಸಿದರೆ ಅಧಿಕ ಇಳುವರಿ ಪಡೆಯಬಹುದು. ಇಂದು ಎಲ್ಲೆಡೆ ಕಾರ್ಮಿಕರ ಕೊರತೆಯಿದ್ದು, ಇದನ್ನು ಬಗೆಹರಿಸಲು ಕೃಷಿಕರು ನೂತನ ತಾಂತ್ರಿಕ ಯಂತ್ರಗಳನ್ನು ಬಳಸಬೇಕು ಎಂದರು.

ಬೆಲೆ ಏರಿಳಿತವು ಕೃಷಿಕರನ್ನು ಆಗಾಗ ತೀವ್ರ ಸಂಕಷ್ಟಕ್ಕೆ ಸಿಲುಕಿಸುತ್ತಿದೆ. ನಮ್ಮ ದೇಶದಲ್ಲಿ ಉತ್ಪಾದನೆಯಾಗುವ ತೆಂಗಿನ ಉತ್ಪನ್ನಗಳಲ್ಲಿ ಶೇಕಡಾ 80ರಷ್ಟು ದೇಶದಲ್ಲಿಯೇ ಬಳಕೆಯಾಗುತ್ತಿದೆ. ಸಿಪಿಸಿಆರ್‌ಐ ಸಂಶೋಧಿಸಿ ಮಾರುಕಟ್ಟೆಗೆ ತಂದ ತೆಂಗಿನ 'ನೀರಾ' ಉತ್ಪನ್ನಕ್ಕೆ ಮಾರುಕಟ್ಟೆಯಲ್ಲಿ ಹೆಚ್ಚಿನ ಪ್ರಚಾರ ಲಭಿಸಿರಲಿಲ್ಲ. ನೀರಾ ಉತ್ಪನ್ನಕ್ಕೆ ಬೇಡಿಕೆ ಕಡಿಮೆಯಾಗಲು ಪ್ರಚಾರದ ಕೊರತೆಯೇ ಮುಖ್ಯ ಕಾರಣ ಎಂದು ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಡಾ.ಪಿ.ಚೌಡಪ್ಪ ಹೇಳಿದರು.

ಅಡಿಕೆ ಫಸಲು ಬಳಸಿ ವಿವಿಧ ಉತ್ಪನ್ನಗಳನ್ನು ತಯಾರಿಸುವ ಸಲುವಾಗಿ ಸಿಪಿಸಿಆರ್‌ಐ ಈಗಾಗಲೇ ನ್ಯಾಷನಲ್ ಪ್ಲಾಂಟ್ ಮೆಡಿಸಿನ್ ಬೋರ್ಡ್‌ಗೆ ಪತ್ರವೊಂದನ್ನು ಬರೆದಿದ್ದು, ಬೋರ್ಡ್‌ನ ವರದಿಗಾಗಿ ಕಾಯಲಾಗುತ್ತಿದೆ. ಅದರ ಸಲಹೆಯಂತೆ ಅಡಿಕೆ ಬಳಸಿ ವಿವಿಧ ಉತ್ಪನ್ನಗಳನ್ನು ಸಿದ್ಧಪಡಿಸಿ ಮಾರುಕಟ್ಟೆಗಿಳಿಸಲಾಗುವುದು ಎಂದವರು ನುಡಿದರು.

ಮಾಚ್ 12ರಂದು ನಡೆಯಲಿರುವ ಕಾರ್ಯಕ್ರಮದಲ್ಲಿ ದೇಶದ ವಿವಿಧೆಡೆಗಳ ಎಂಟು ಹಾರ್ಟಿಕಲ್ಚರ್ ನಿರ್ದೇಶನಾಲಯಗಳ ಅಧಿಕಾರಿಗಳು, ಮಂಗಳೂರು ಕ್ಯಾಂಪ್ಕೋ ಸಂಸ್ಥೆಯ ಅಧಿಕಾರಿಗಳು ಮತ್ತಿತರರು ಪಾಲ್ಗೊಳ್ಳುವರು ಎಂದು ಸಿಪಿಸಿಆರ್‌ಐ ನಿರ್ದೇಶಕರು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಕಾಸರಗೋಡು ಸಿಪಿಸಿಆರ್‌ಐಯ ವಿಜ್ಞಾನಿಗಳಾದ ಡಾ.ಕೆ. ಮುರಳೀಧರನ್, ಡಾ.ಸಿ.ತಂಬಾನ್ ಮುಂತಾದವರು ಉಪಸ್ಥಿತರಿದ್ದರು.




## ಕೃಷಿ ಕ್ಷೇತ್ರಕ್ಕೆ ಬಹುದೊಡ್ಡ ಸವಾಲು

**ಸ್ಥಳ ಮತ್ತು ನೀರಿನ ಕೊರತೆಯು ಇಂದು ಕೃಷಿಗೆ ಭಾರೀ ಮಾರಕವಾಗಿ ಪರಿಣಮಿಸಿದೆ. ಈ ನಡುವೆ ಯುವಕರು ಕೃಷಿಯ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಿಲ್ಲ. ಯುವಕರು ಉನ್ನತ ಶಿಕ್ಷಣಕ್ಕೆ ಆದ್ಯತೆ ತೋರುತ್ತಿದ್ದಾರೆ. ಇದರಿಂದಾಗಿಯೂ ಕೃಷಿ ಉತ್ಪಾದನೆ ಕುಂಠಿತಗೊಳ್ಳುತ್ತಿದೆ. ಇದರ ಮಧ್ಯೆ ಭಾರತದ ಜನಸಂಖ್ಯೆಯೂ ತೀವ್ರಗತಿಯಲ್ಲಿ ಏರಿಕೆಯಾಗುತ್ತಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಭವಿಷ್ಯದಲ್ಲಿ ಕೃಷಿ ಕ್ಷೇತ್ರವು ಭಾರೀ ದೊಡ್ಡ ಸವಾಲುಗಳನ್ನು ಎದುರಿಸಬೇಕಾದೀತು ಎಂದು ಎಚ್ಚರಿಸಿದರು.**